ದಿಃ 8.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಹೆಚ್.ವಿ ವಕೀಲರಿಂದ ,**

1. ನನ್ನ ತಂದೆಯ ಹೆಸರು ನಿಂಗಪ್ಪ. ನನ್ನ ತಾಯಿಯ ಹೆಸರು ಸಣ್ಣಲಕ್ಷ್ಮಮ್ಮ. ನನ್ನ ತಂದೆ ತಾಯಿ ಇಬ್ಬರು ಮೃತಪಟ್ಟಿರುತ್ತಾರೆ. 3, 5 ಹಾಗೂ 7 ನೇ ಪ್ರತಿವಾದಿಯರು ನನ್ನ ತಮ್ಮಂದಿರು. 6 ನೇ ಪ್ರತಿವಾದಿ ಹಾಗೂ ಮೃತ 4 ನೇ ಪ್ರತಿವಾದಿಯರು ನನ್ನ ತಂಗಿಯರು. ಪ್ರತಿವಾದಿ 4(ಎ) ಯಿಂದ 4(ಎಫ್) ರವರು ಮೃತ 4 ನೇ ಪ್ರತಿವಾದಿಯ ವಾರಸುದಾರರು ಎಂದರೆ ಸರಿ. ವಾದಿ ಹಾಗೂ ಪ್ರತಿವಾದಿಯವರನ್ನು ಹೊರುತಪಡಿಸಿ ನನ್ನ ತಂದೆ ತಾಯಿಗೆ ಬೇರೆ ವಾರಸುದಾರರು ಇಲ್ಲ ಎಂದರೆ ಸರಿ. ದಾವಾ ಸ್ವತ್ತುಗಳ ಬಗ್ಗೆ ನನಗೆ ತಿಳಿದಿರುತ್ತದೆ. ದಾವಾ ಬಿ ಅನುಸೂಚಿ 1 ನೇ ಸ್ವತ್ತನ್ನು ನನ್ನ ತಂದೆ ತಾಯಿ ಮೃತ 4 ನೇ ಪ್ರತಿವಾದಿಗೆ ಆಕೆಯ ಮದುವೆ ಸಮಯದಲ್ಲಿ ಅರಿಶಿಣ ಕುಂಕುಮಕ್ಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ಆಕೆ ಮನೆ ನಿರ್ಮಿಸಿಕೊಂಡು ವಾಸವಿರುತ್ತಾರೆ ಎಂದರೆ ಸಾಕ್ಷಿ ಸದರಿ ಸ್ವತ್ತಿನಲ್ಲಿ 4 ನೇ ಪ್ರತಿವಾದಿ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಬಿ ಅನುಸೂಚಿ 2 ನೇ ಸ್ವತ್ತಿನಲ್ಲಿ ಪ್ರತಿವಾದಿ 3, 5 ಹಾಗೂ 7 ರವರು ಮನೆ ನಿರ್ಮಿಸಿಕೊಂಡು ವಾಸವಿರುತ್ತಾರೆ ಎಂದರೆ ಸಾಕ್ಷಿ ಸದರಿ ಸ್ವತ್ತಿನಲ್ಲಿ 7 ನೇ ಪ್ರತಿವಾದಿ ಮಾತ್ರ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ ಸದರಿ ಮೂವರು ವಾಸವಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ದಾವಾ ಬಿ ಅನುಸೂಚಿ 3 ನೇ ಸ್ವತ್ತು ನನ್ನ ತಂದೆಯ ಹೆಸರಿಗೆ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಅದರಲ್ಲಿ ನಾನು ವಾಸವಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಬಿ ಅನುಸೂಚಿ 4 ನೇ ಸ್ವತ್ತು ನನ್ನ ತಂದೆಯ ಹೆಸರಿಗೆ ಇರುತ್ತದೆ ಎಂದರೆ ಸಾಕ್ಷಿ ಅದನ್ನು 7 ನೇ ಪ್ರತಿವಾದಿ ತನ್ನ ಹೆಸರಿಗೆ ವರ್ಗಾಯಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಂಬಂಧ ನಾನು

ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ದಾವಾ ಸ್ವತ್ತುಗಳನ್ನು ಹೊರತುಪಡಿಸಿ ನನ್ನ ತಂದೆ ತಾಯಿ ಹೆಸರಿಗೆ ಯಾವುದೇ ಸ್ವತ್ತುಗಳು ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು, ನಾಗತಿಬೆಳಗಲು ಗ್ರಾಮದ ಸರ್ವೆ ನಂ. 136, 137 ಹಾಗೂ 138 ರಲ್ಲಿನ ಒಟ್ಟು ಎರಡು ಎಕರೆ ಜಮೀನು ನಮ್ಮ ಕುಟುಂಬಕ್ಕೆ ಸೇರಿದ್ದು, ಅದನ್ನು ದಾವೆಯಲ್ಲಿ ಸೇರಿಸಿಲ್ಲ ಎಂದು ನುಡಿಯುತ್ತಾರೆ. ಆ ಸಂಬಂಧ ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ಸದರಿ ಸ್ವತ್ತುಗಳು ನಮ್ಮ ಒಟ್ಟು ಕುಟುಂಬಕ್ಕೆ ಸೇರಿದಲ್ಲ ಎಂದರೆ ಸರಿಯಲ್ಲ.

3. ದಾವಾ ಸ್ವತ್ತುಗಳು ಮೂಲತಃ ನನ್ನ ತಂದೆ ತಾಯಿಗೆ ಸೇರಿದ್ದವು ಎಂದರೆ ಸಾಕ್ಷಿ ದಾವಾ ಎ ಅನುಸೂಚಿ 13 ರಿಂದ 19 ನೇ ಸ್ವತ್ತುಗಳು ನನ್ನ ಸ್ವಯಾರ್ಜಿತ ಸ್ವತ್ತುಗಳು ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿ ತಮ್ಮ ಸ್ವತ್ತುಗಳಲ್ಲಿ ಭತ್ತ ಹಾಗೂ ಕಬ್ಬನ್ನು ಬೆಳೆಯುತ್ತಿದ್ದರು ಎಂದರೆ ಸರಿ. ನನ್ನ ತಂದೆಯ ಮರಣದ ನಂತರ ಕುಟುಂಬಕ್ಕೆ ನಾನೇ ಹಿರಿಯ ಮಗ ಎಂದರೆ ಸರಿ. ಸಾಕ್ಷಿ ಮುಂದುವರೆದು, ನನ್ನ ತಂದೆ ತಮ್ಮ ಜೀವಿತಾ ಕಾಲದಲ್ಲಿಯೇ ಸ್ವತ್ತುಗಳನ್ನು ಹಂಚಿಕೆ ಮಾಡಿದ್ದರು ಎಂದು ನುಡಿಯುತ್ತಾರೆ. ಆ ಸಂಬಂಧ ಯಾವುದೇ ದಾಖಲೆ ಆಗಿಲ್ಲ ಎಂದರೆ ಸಾಕ್ಷಿ ಸದರಿ ಹಂಚಿಕೆ ಮಾಡಿದ ಸಮಯ ನನ್ನ ತಂದೆ ಅದನ್ನು ಬಿಳಿ ಹಾಳೆಯ ಮೇಲೆ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪತ್ರದಂತೆ ನಮ್ಮಗಳ ಹೆಸರಿಗೆ ಕಂದಾಯ ದಾಖಲೆಗಳು ಬದಲಾವಣೆ ಆಗಿಲ್ಲ ಎಂದರೆ ಸರಿ.

4. ಸುಮಾರು 51 ವರ್ಷಗಳ ಹಿಂದೆ ನನ್ನ ಮದುವೆಯಾಗಿರುತ್ತದೆ. ದಿನಾಂಕ 1/05/1977 ರಲ್ಲಿ ನನ್ನ ಮದವೆ ಪಾರ್ವತಮ್ಮ ಎಂಬುವವರ ಜೊತೆ ನೆರವೇರಿತು ಎಂದರೆ ಸರಿಯಲ್ಲ. ಆಕೆಗೆ ಕಿರುಕುಳ ನೀಡಿ ನಾನು ಆಕೆಯನ್ನು ಮನೆಯಿಂದ ಹೊರ

ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯ ನಮ್ಮ ಕುಟುಂಬದ ಒಂದು ಎಕರೆ ಜಮೀನನ್ನು ನಾವು ಆಕೆಗೆ ಪರಿಹಾರವಾಗಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ನಾನು ಮತ್ತೊಂದು ಮದುವೆಯಾಗಿರುತ್ತೇನೆ ಎಂದರೆ ಸಾಕ್ಷಿ ನಾನು ಮಹಾಲಕ್ಷ್ಮೀ ಎಂಬಾಕೆಯನ್ನು ಮಾತ್ರ ಮದುವೆಯಾಗಿರುತ್ತೇನೆ ಎಂದು ನುಡಿಯುತ್ತಾರೆ. ನಮಗೆ ಮೂರು ಜನ ಮಕ್ಕಳು. ಅವರೇಂದರೆ, ಗಿರೀಶ ಯಾನೆ ಗುರುರಾಜ, ಸುದೀಪ ಯಾನೆ ಮೈಲಾರಿ ಮತ್ತು ಮಾಲತಿ. ಸದರಿ ಗಿರೀಶನ ಹೆಂಡತಿಯ ಹೆಸರು ಪೂಜ ಎಂದರೆ ಸರಿಯಲ್ಲ. ಅವರ ವಿವಾಹ ವಿಚ್ಛೇದನ ಆಗಿರುತ್ತದೆ ಎಂದರೆ ಸರಿಯಲ್ಲ.

5. ನಾನು ನಮ್ಮ ಕುಟುಂಬದ ಹಿರಿಯವನಾದ ಕಾರಣ ಕುಟುಂಬದ ಎಲ್ಲಾ ಸ್ವತ್ತುಗಳನ್ನು ನಾನೇ ನೋಡಿಕೊಳ್ಳುತ್ತಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಎ ಅನುಸೂಚಿ 13 ರಿಂದ 17 ನೇ ಸ್ವತ್ತುಗಳನ್ನು ನನ್ನ ತಂದೆ ತಾಯಿ ಒಟ್ಟು ಕುಟುಂಬದ ಆದಾಯದಿಂದ ನನ್ನ ಹೆಸರಿಗೆ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಸದರಿ ಸ್ವತ್ತುಗಳನ್ನು ನನ್ನ ಸ್ವಂತ ಆದಾಯದಿಂದ ನಾನು ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತುಗಳನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ್ದರೂ ನಾನ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಎ ಅನುಸೂಚಿ 1 ರಿಂದ 12 ನೇ ಸ್ವತ್ತುಗಳಲ್ಲಿ ನಾವು ಅಡಿಕೆ ತೋಟ ಮಾಡಿರುತ್ತೇವೆ ಎಂದರೆ ಸರಿ. ದಾವಾ ಎ ಅನುಸೂಚಿ ಸ್ವತ್ತುಗಳಲ್ಲಿ ಹಾಲಿ ಏನು ಬೆಳೆ ಇರುತ್ತದೆ ಎಂದರೆ ಸಾಕ್ಷಿ ನಮ್ಮ ತಂದೆ ಸ್ವತ್ತುಗಳ ಹಂಚಿಕೆ ಮಾಡಿದ ನಂತರ ನನ್ನ ಪಾಲಿನ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಸ್ವತ್ತುಗಳ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ.

6. ನನ್ನ ತಂದೆಯ ಜೀವಿತ ಕಾಲದಲ್ಲಿ ನಮ್ಮಗಳ ನಡುವೆ ಸ್ವತ್ತುಗಳ ಹಂಚಿಕೆ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ-ತಾಯಿಯ ಜೀವಿತ ಕಾಲದವರೆಗೆ ಸ್ವತ್ತುಗಳ ಹಂಚಿಕೆ ಮಾಡಿಕೊಳ್ಳದಂತೆ ನಾನು ನನ್ನ ಸೋದರ ಸೋದರಿಯರಿಗೆ ತಿಳಿಸಿ

ದಾವಾ ಸ್ವತ್ತುಗಳನ್ನು ಒಟ್ಟಿಗೆ ಅನುಭವಿಸುತ್ತಿರುತ್ತೇವೆ ಎಂದರೆ ಸರಿಯಲ್ಲ. ಆ ಸಂಬಂಧ ಪ್ರತಿವಾದಿ 5 ರವರು ಭದ್ರಾವತಿಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್.ಸಂಖ್ಯೆ 15/2016 ರಂತೆ ವಿವಾದ ಕೋರಿ ದಾವೆ ಹೂಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು, ಆ ಸಮಯ ನಾನು ಕುಟುಂಬದ ಎಲ್ಲಾರನ್ನು ಪಂಚಾಯಿತಿಗೆ ಕರೆದಿದ್ದು, ಅವರುಗಳು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾದರೂ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ಹೆಣ್ಣುಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡದ ಕಾರಣ ದಾವೆ ವಜಾ ಆಗಿರುತ್ತದೆ ಎಂದರೆ ನನಗೆ ತಿಳಿದಿಲ್ಲ. ನಂತರದಲ್ಲಿ, ವಾದಿಯು ದಾವಾ ಸ್ವತ್ತುಗಳಲ್ಲಿ ಪಾಲು ನೀಡುವಂತೆ ನನ್ನನ್ನು ಕೇಳುತ್ತಿರುತ್ತಾರೆ ಎಂದರೆ ಸಾಕ್ಷಿ ವಿಭಾಗ ಮಾಡುವಂತೆ ನಾನೇ ಎಲ್ಲಾರನ್ನು ಕೇಳಿದ್ದರು ಅವರು ಒಪ್ಪಿರುವುದಿಲ್ಲ ಎಂದು ನುಡಿಯುತ್ತಾರೆ.

7. ಒಟ್ಟು ಕುಟುಂಬದ ಸ್ವತ್ತುಗಳ ಆಧಾರದ ಮೇಲೆ ನಾನು ಬ್ಯಾಕಿನಲ್ಲಿ ಸಾಲ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆ ಸಂಬಂಧ ವಾದಿ ಹಾಗೂ ಪ್ರತಿವಾದಿಯರೆಲ್ಲಾರು ದಾಖಲೆಗಳಿಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸಾಲ ಮರುಪಾವತಿ ಕೋರಿ ಬ್ಯಾಂಕಿನವರು ನಮ್ಮಗಳ ಮೇಲೆ ದಾವೆ ಹೂಡಿದ್ದರು ಎಂದರೆ ಸಾಕ್ಷಿ ನನ್ನ ತಂದೆಯ ವಿರುದ್ಧ ಹೂಡಿದ್ದರು ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ಸಹ ಪಕ್ಷಗಾರನಾಗಿದ್ದೆನು ಎಂದರೆ ನನಗೆ ತಿಳಿದಿಲ್ಲ. ಸಾಕ್ಷಿ ಮುಂದುವರೆದು, ಸದರಿ ಸಾಲ ತಿರುವಳಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಾಲವನ್ನು ಯಾರು ತಿರುವಳಿ ಮಾಡಿರುತ್ತಾರೆ ಎಂದು ನನ್ನ ತಂದಗೆ ತಿಳಿದಿದ್ದು, ನನಗೆ ತಿಳಿದಿರುವುದಿಲ್ಲ.

**ಪಾಟೀ ಸವಾಲು ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

***(ಟಿ.ಶ್ರೀಕಾಂತ್)***
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**